# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1214 |
| 2) | ಮಾನ್ಯ ಸದಸ್ಯರ ಹೆಸರು | : ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸುವ ದಿನಾಂಕ | : 23/12/2021 |
| 4) | ಉತ್ತರಿಸುವ ಸಚಿವರು | : ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಬಿನ್ನಿಮಿಲ್ ಪೊಲೀಸ್ ವಸತಿಗೃಹ ಸಮುಚ್ಛಯದ ಬಿ ಬ್ಲಾಕ್ ಕಟ್ಟಡವು ಇತ್ತೀಚಿಗೆ ಸುಮಾರು 2 ಅಡಿಗಳಷ್ಟು ವಾಲಿ, ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, 3 ವರ್ಷಗಳ ಹಿಂದೆ ಕಟ್ಟಿರುವ ಈ ಕಟ್ಟಡವು ಈ ರೀತಿಯಾಗಲು ಕಾರಣಗಳೇನು; ಈ ರೀತಿಯ ಕಳಪೆ ಕಾಮಗಾರಿಗಳನ್ನು ಕೈಗೊಂಡಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಬೆಂಗಳೂರು ನಗರದ ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಬಿನ್ನಿಮಿಲ್ ಪೊಲೀಸ್ ವಸತಿಗೃಹ ಸಮುಚ್ಛಯದ 'ಬಿ' ಬ್ಲಾಕ್ ಕಟ್ಟಡವು ಇತ್ತೀಚೆಗೆ ವಾಲಿಕೊಂಡಿರುವುದರಿಂದ ತಾಂತ್ರಿಕ ಸಲಹೆಗಾರರ ಸಲಹೆಯಂತೆ ಸದರಿ ಕಟ್ಟಡದಲ್ಲಿ ವಾಸವಿದ್ದ 32 ಕುಟುಂಬಗಳನ್ನು ಸುರಕ್ಷತೆಯ ದೃಷ್ಟಿಯಿಂದ ಹಾಗೂ ಕಟ್ಟಡದ ಪುನರೋತ್ಥಾನದ ಕಾರ್ಯಗಳಿಗಾಗಿ ಖಾಲಿ ಮಾಡಿಸಲಾಗಿರುತ್ತದೆ. ಈ ಪ್ರಕರಣವನ್ನು ಸರ್ಕಾರವು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಸದರಿ ವಸತಿಗೃಹ ಸಮುಚ್ಛಯಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ಸದರಿ ಕಟ್ಟಡವು ನಿರ್ಮಾಣಗೊಂಡು ಮೂರು ವರ್ಷದ ಅವಧಿಯೊಳಗೆ ವಾಲಲು ಕಾರಣವಾದ ತಾಂತ್ರಿಕ ವೈಫಲ್ಯಗಳ ಬಗ್ಗೆ ಹಾಗೂ ಇದಕ್ಕೆ ಕಾರಣಕರ್ತರಾದವರ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ದಿ ನಿಗಮ ನಿಯಮಿತ, ಬೆಂಗಳೂರು, ಇವರಿಗೆ ಸೂಚಿಸಲಾಗಿರುತ್ತದೆ. ವರದಿ ಸ್ವೀಕೃತವಾದ ತಕ್ಷಣ ಸದರಿ ಕಟ್ಟಡವನ್ನು ಪುನರೋತ್ಥಾನ ಮಾಡುವ ಬಗ್ಗೆ ಹಾಗೂ ಇದಕ್ಕೆ ಕಾರಣಕರ್ತರಾದವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ವಹಿಸಲಾಗುವುದು. ಸದರಿ ಕಟ್ಟಡದ ಪುನರೋತ್ಥಾನ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಈಗಾಗಲೇ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ದಿ ನಿಗಮ ನಿಯಮಿತ, ಬೆಂಗಳೂರು, ಇವರಿಗೆ ಕಟ್ಟು ನಿಟ್ಟಿನ ಸೂಚನೆ ನೀಡಲಾಗಿರುತ್ತದೆ. |
| ಆ) | ಈ ವಸತಿಗೃಹ ಸಮುಚ್ಛಯದ ಬಿ ಬ್ಲಾಕ್‌ನ 32 ಮನೆಯವರನ್ನು ಮಾತ್ರ ಖಾಲಿ ಮಾಡಿಸಿದ್ದು, ಇದೇ ಬ್ಲಾಕ್‌ನ ಉಳಿದ 32 ಮನೆಗಳು ಮತ್ತು ಅಕ್ಕಪಕ್ಕದಲ್ಲಿರುವ ಎ ಮತ್ತು ಸಿ ಬ್ಲಾಕ್‌ಗಳಲ್ಲಿನ ಮನೆಗಳು ವಾಸ ಮಾಡಲು ಸುರಕ್ಷಿತವಾಗಿವೆಯೇ; ಸುರಕ್ಷಿತವಾಗಿದ್ದಲ್ಲಿ, ಈ ಬಗ್ಗೆ ತಾಂತ್ರಿಕ ಪರಿಶೀಲನೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ, ತಾಂತ್ರಿಕ ಪರಿಶೀಲನಾ ವರದಿ ನೀಡುವುದು. | |
| ಇ) | ಈ ವಸತಿಗೃಹ ಸಮುಚ್ಛಯದ ಬಿ ಬ್ಲಾಕ್‌ನ 32 ಮನೆಯವರನ್ನು ಮಾತ್ರ ಖಾಲಿ ಮಾಡಿಸಿದ್ದು, ಇದೇ ಬ್ಲಾಕ್‌ನ ಉಳಿದ 32 ಮನೆಗಳು ಮತ್ತು ಅಕ್ಕಪಕ್ಕದಲ್ಲಿರುವ ಎ ಮತ್ತು ಸಿ ಬ್ಲಾಕ್‌ಗಳಲ್ಲಿ ವಾಸ ಮಾಡುತ್ತಿರುವವರನ್ನು ಸ್ಥಳಾಂತರಗೊಳಿಸುವ ಯೋಚನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇವರನ್ನು ಎಲ್ಲಿಗೆ ಹಾಗೂ ಯಾವ ಕಾಲಮಿತಿಯಲ್ಲಿ ಸ್ಥಳಾಂತರಗೊಳಿಸಲಾಗುವುದು? (ವಿವರ ನೀಡುವುದು) | |

**ಸಂಖ್ಯೆ:ಹೆಚ್‌ಡಿ 106 ಪಿಬಿಎಲ್ 2021**

(ಆರಗ ಜ್ಞಾನೇಂದ್ರ)
ಗೃಹ ಸಚಿವರು